**ಕರ್ನಾಟಕ ಸರ್ಕಾರ**
**ಪ್ರವಾಸೋದ್ಯಮ ಇಲಾಖೆ**

ಪ್ರವಾಸೋದ್ಯಮ ನಿರ್ದೇಶಕರ ಕಛೇರಿ, #49, 2ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.

# ಅಧಿಸೂಚನೆ

ಸಂಖ್ಯೆ: ಪ್ರಇ/ಆಡಳಿತ–1/37/2008–09/ಭಾಗ–II ದಿನಾಂಕ: 02–01–2012

**ಪ್ರವಾಸೋದ್ಯಮ ಇಲಾಖೆಯಲ್ಲಿ ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ "ಪ್ರವಾಸೋದ್ಯಮ ಕಾರ್ಯನಿರ್ವಾಹಕರ" ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ**

ಪ್ರವಾಸೋದ್ಯಮ ಇಲಾಖೆಯಲ್ಲಿ 3 (ಮೂರು) ವರ್ಷಗಳ ಅವಧಿಗೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು **ಗುತ್ತಿಗೆ ಆಧಾರದ ಮೇಲೆ** 30 (ಮೂವತ್ತು) "ಪ್ರವಾಸೋದ್ಯಮ ಕಾರ್ಯನಿರ್ವಾಹಕರ" ಹುದ್ದೆಗಳಿಗೆ ನೇಮಕಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಇಲಾಖೆ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಈ ಅಧಿಸೂಚನೆಗೆ ಅಳವಡಿಸಲಾಗಿರುತ್ತದೆ. ಅಲ್ಲದೆ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿಯೂ ಸಹ ಬಿತ್ತರಿಸಲಾಗಿದೆ. (ವೆಬ್ ಸೈಟ್ www.karnatakatourism.org).

**1. ಅರ್ಹತಾ ಷರತ್ತುಗಳು:**

ಅ. ಭಾರತೀಯ ನಾಗರೀಕನಾಗಿರತಕ್ಕದ್ದು.
ಆ. ಅಭ್ಯರ್ಥಿಯು ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು.

**2. ಶೈಕ್ಷಣಿಕ ವಿದ್ಯಾರ್ಹತೆ:**

ಟೂರಿಸಂ ಅಡ್ಮಿನಿಸ್ಟ್ರೇಷನ್ನಲ್ಲಿ ಸ್ನಾತಕೋತ್ತರ ಪದವೀಧರರಾಗಿರಬೇಕು (Master of Tourism Administration)

**3. ಅನುಭವ:**

ಪ್ರವಾಸೋದ್ಯಮದ ಉದ್ದಿಮೆಯಲ್ಲಿ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು.

**4. ಸಂಚಿತ ವೇತನ:**

ತಿಂಗಳಿಗೆ ರೂ.7,500/–ಗಳ ಸಂಚಿತ ವೇತನ ಹಾಗೂ ರೂ.2,500/–ಗಳ ಪ್ರಯಾಣ ಭತ್ಯೆ.

...2

**<u>೫. ಆಯ್ಕೆ ವಿಧಾನ:</u>**

ಅಭ್ಯರ್ಥಿಯ ವಿದ್ಯಾರ್ಹತೆ ಆಧಾರದ ಮೇಲೆ (On educational qualification merit basis) ಆಯ್ಕೆ ಮಾಡಲಾಗುವುದು.

**<u>೬. ವಯೋಮಿತಿ:</u>**

ಅ. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯ ವಯಸ್ಸು 18 ವರ್ಷ ಪೂರೈಸಿರತಕ್ಕದ್ದು.

ಆ. ಗರಿಷ್ಠ ವಯೋಮಿತಿ 35–ವರ್ಷಗಳು ಸಾಮಾನ್ಯ ಅಭ್ಯರ್ಥಿಗಳಿಗೆ.

ಇ. 2(ಎ), 2(ಬಿ), 3(ಎ) ಮತ್ತು 3(ಬಿ) ಈ ಅಭ್ಯರ್ಥಿಗಳಿಗೆ 38–ವರ್ಷಗಳು.

ಈ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ಈ ಅಭ್ಯರ್ಥಿಗಳಿಗೆ 40–ವರ್ಷಗಳು

**ಸೂಚನೆ**: ಮಾಜಿ ಸೈನಿಕ ಅಭ್ಯರ್ಥಿಗಳಿಗೆ ನಿಯಮಾನುಸಾರ ವಯೋಮಿತಿ ಸಡಿಲಿಕೆ ಇರುತ್ತದೆ.

7. **<u>ಹುದ್ದೆಗಳ ಸಂಖ್ಯೆ :</u>** ಒಟ್ಟು 30 (ಮೂವತ್ತು) ಹುದ್ದೆಗಳು ಪ್ರತಿ ಜಿಲ್ಲೆಗೆ ಒಂದರಂತೆ.

8. **<u>ನೇಮಕಾತಿ ಷರತ್ತುಗಳು:</u>**

ಅ. ಈ ನೇಮಕಾತಿಯು ಅಪ್ಪಟ ತಾತ್ಕಾಲಿಕವಾಗಿದ್ದು ಅಭ್ಯರ್ಥಿಯು ಕರ್ತವ್ಯಕ್ಕೆ ನೇಮಕಗೊಂಡ ದಿನಾಂಕದಿಂದ ಗರಿಷ್ಠ 3 (ಮೂರು) ವರ್ಷಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಯಾವುದೇ ಕಾರಣಕ್ಕೂ ಸೇವೆಯಲ್ಲಿ ಮುಂದುವರೆಯುವ ಅಥವಾ ಸೇವೆಯಲ್ಲಿ ಖಾಯಂಗೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ.

ಆ. ತಾತ್ಕಾಲಿಕವಾಗಿ ನೇಮಕಗೊಂಡು ಕೆಲಸ ನಿರ್ವಹಿಸುವ ಅವಧಿಯಲ್ಲಿ ಅಭ್ಯರ್ಥಿಯು ಗೈರುಹಾಜರಾದಲ್ಲಿ ಅಥವಾ ಇಲಾಖೆಗೆ ಸಂಬಂಧಪಟ್ಟ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಅಥವಾ ತೀವ್ರ ಸ್ವರೂಪದ ಅಪರಾಧ ಪ್ರಕರಣದಲ್ಲಿ ಭಾಗಿಯಾದರೆ ಯಾವುದೇ ಕಾರಣ ಅಥವಾ ಮುನ್ಸೂಚನೆ ನೀಡದೆ ಇಲಾಖೆಯ ಮುಖ್ಯಸ್ಥರು ಸದರಿ ನೇಮಕಾತಿಯನ್ನು ರದ್ದುಪಡಿಸಬಹುದಾಗಿರುತ್ತದೆ.

ಮೇಲೆ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿಗೆ ಇರುವ ಅಭ್ಯರ್ಥಿಗಳು ಮಾತ್ರ ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಈ ಬಗ್ಗೆ ಅಭ್ಯರ್ಥಿಗಳು ಒಪ್ಪಿಗೆ ಪತ್ರವನ್ನು ಲಿಖಿತ ಮೂಲಕ ಇಲಾಖೆಗೆ ಸಲ್ಲಿಸತಕ್ಕದ್ದು.

## **೨. ಪ್ರಮುಖವಾದ ಸೂಚನೆಗಳು:**

1. **ಭಾಷಾ ಜ್ಞಾನ:** ಅಭ್ಯರ್ಥಿಗಳಿಗೆ ಕನ್ನಡ ಮತ್ತು ಇಂಗ್ಲೀಷ್ ಭಾಷಾ ಜ್ಞಾನ ಕಡ್ಡಾಯವಾಗಿರುತ್ತದೆ. ಮತ್ತು ಇತರ ಭಾಷೆಗಳ ಜ್ಞಾನ ಅಪೇಕ್ಷಣೀಯ.

2. ಅರ್ಜಿ ನಮೂನೆಯನ್ನು ರೂ.100/-(ರೂ.ಒಂದು ನೂರು ಮಾತ್ರ)ಗಳನ್ನು ಪಾವತಿ ಮಾಡಿ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ನಂ.49, 2ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001 ಹಾಗೂ ಈ ಕೆಳಕಂಡ ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಕಛೇರಿಗಳಲ್ಲಿ, ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

| ಕ್ರ.ಸಂ. | ಪ್ರವಾಸೋದ್ಯಮ ಕಛೇರಿಗಳ ಸ್ಥಳ | ದೂರವಾಣಿ ಸಂಖ್ಯೆ | ಕ್ರ.ಸಂ. | ಪ್ರವಾಸೋದ್ಯಮ ಕಛೇರಿಗಳ ಸ್ಥಳ | ದೂರವಾಣಿ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು | 080-22352828 | 8 | ಚಿಕ್ಕಮಗಳೂರು | 08262-228493 |
| 2 | ಮೈಸೂರು | 0821-2422096 | 9 | ಶಿವಮೊಗ್ಗ | 08182-251444 |
| 3 | ಹಾಸನ | 08172-268862 | 10 | ಬಿಜಾಪುರ | 08352-250359 |
| 4 | ಹೊಸಪೇಟೆ | 08394-228537 | 11 | ಬಾಗಲಕೋಟೆ | 08354-235709 |
| 5 | ಉಡುಪಿ | 0820-2529718 | 12 | ಗುಲ್ಬರ್ಗಾ | 08472-277848 |
| 6 | ಕಾರವಾರ | 08382-221172 | 13 | ಚಾಮರಾಜನಗರ | 08226-226512 |
| 7 | ರಾಮನಗರ | 080-27304971 | 14 | ಮಂಡ್ಯ | 08232-238377 |

3. **ಅರ್ಜಿ ಸಲ್ಲಿಸುವ ವಿಧಾನ:**

ಅ ಅರ್ಜಿಗಳನ್ನು ಇಲಾಖೆಯು ನಿಗಧಿಪಡಿಸಿರುವ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು.

ಆ ಅರ್ಜಿಗಳನ್ನು ಪಡೆಯಬಹುದಾದ ದಿನಾಂಕ 02.01.2012 ರಿಂದ 31.01.2012 ರವರೆಗೆ

ಇ. ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ನಂ.49, 2ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001 ಇವರಿಗೆ ದಿನಾಂಕ 10-02-2012 ರಂದು ಅಥವಾ ಅದಕ್ಕಿಂತ ಮೊದಲೆ ತಲುಪುವಂತೆ **ಅಂಚೆಯ ಮೂಲಕವಷ್ಟೇ** ಸಲ್ಲಿಸತಕ್ಕದ್ದು. (ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ).

ಈ. ಲಕೋಟೆಯ ಮೇಲೆ **"<u>ಗುತ್ತಿಗೆ ಆಧಾರದ ಮೇಲೆ</u> ಪ್ರವಾಸೋದ್ಯಮ ಕಾರ್ಯನಿರ್ವಾಹಕರ ಹುದ್ದೆಗೆ ನೇಮಕಾತಿ"** ಎಂದು ಕಡ್ಡಾಯವಾಗಿ ಬರೆದಿರಬೇಕು.

4. ಅರ್ಜಿಗೆ ಇತ್ತೀಚಿನ 1 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸತಕ್ಕದ್ದು ಮತ್ತು 1 ಭಾವಚಿತ್ರವನ್ನು ಲಕೋಟೆಯಲ್ಲಿಟ್ಟು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

5. ಹುದ್ದೆಗೆ ನಿಗಧಿಪಡಿಸಲಾದ ಮಾಸ್ಟರ್ ಆಫ್ ಟೂರಿಸಂ ಅಡ್ಮಿನಿಸ್ಟ್ರೇಷನ್ ಕೋರ್ಸ್‌ನ ಪ್ರಮಾಣ ಪತ್ರದ ದೃಢೀಕೃತ ಜ಼ೆರಾಕ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು.

6. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ (ಟಿ.ಸಿ.)/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (Cumulative Record) ಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸತಕ್ಕದ್ದು.

7. ಪರಿಶಿಷ್ಟ ಜಾತಿ – ಪರಿಶಿಷ್ಟ ಪಂಗಡ – ಪ್ರವರ್ಗ–1 – ಪ್ರವರ್ಗ–2ಎ – ಪ್ರವರ್ಗ–2ಬಿ – ಪ್ರವರ್ಗ–3ಎ – ಪ್ರವರ್ಗ–3ಬಿ ಈ ಮೀಸಲಾತಿ ಅಭ್ಯರ್ಥಿಗಳು ನಮೂನೆ 'ಡಿ' – 'ಇ' – 'ಎಫ್' ನಲ್ಲಿ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸತಕ್ಕದ್ದು.

(ಹಿಂದುಳಿದ ವರ್ಗಗಳ ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಐದು ವರ್ಷಗಳ ಅವಧಿಯಲ್ಲಿರಬೇಕು).

8. ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು ಅದರ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

...5

9. **<u>ಹುದ್ದೆಗಳ ವರ್ಗೀಕರಣ</u>**

| **ಮೀಸಲಾತಿ** | **ಇತರೆ** | **ಮಹಿಳೆ** | **ಗ್ರಾಮೀಣ** | **ಮಾಜಿ ಸೈನಿಕ** | **ಕನ್ನಡ ಮಾಧ್ಯಮ** | **ಒಟ್ಟು** |
|---|---|---|---|---|---|---|
| ಪರಿಶಿಷ್ಟ ಜಾತಿ | 02 | 02 | 01 | – | – | 05 |
| ಪರಿಶಿಷ್ಟ ಪಂಗಡ | 01 | – | – | – | – | 01 |
| ಪ್ರವರ್ಗ–1 | 01 | – | – | – | – | 01 |
| ಪ್ರವರ್ಗ–2ಎ | 02 | 02 | 01 | – | – | 05 |
| ಪ್ರವರ್ಗ–2(ಬಿ) | 01 | – | – | – | – | 01 |
| ಪ್ರವರ್ಗ–3(ಎ) | 01 | – | – | – | – | 01 |
| ಪ್ರವರ್ಗ–3(ಬಿ) | 01 | – | – | – | – | 01 |
| ಸಾಮಾನ್ಯ ಅಭ್ಯರ್ಥಿ | 04 | 05 | 04 | 01 | 01 | 15 |
| **ಒಟ್ಟು ಹುದ್ದೆಗಳು** | 13 | 09 | 06 | 01 | 01 | 30 |

10. **ಸೂಚನೆ**: ಮೇಲ್ಕಂಡ ವರ್ಗೀಕರಣದಂತೆ ಯಾವುದೇ ಮೀಸಲಾತಿಯಡಿ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲಾಗುವುದು.

11. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆಯ ಕೇಂದ್ರ ಕಛೇರಿಯ ಉಪ ನಿರ್ದೇಶಕರು (ಆಡಳಿತ) ರವರನ್ನು <u>ದೂರವಾಣಿ ಸಂಖ್ಯೆ 080–22352727</u> ರಲ್ಲಿ ಸಂಪರ್ಕಿಸಬಹುದು.

(ಕೆ.ವಿಶ್ವನಾಥ ರೆಡ್ಡಿ, ಭಾ.ಆ.ಸೇ.,)
ನಿರ್ದೇಶಕರು,
ಪ್ರವಾಸೋದ್ಯಮ ಇಲಾಖೆ,
ಬೆಂಗಳೂರು.